# ಕೆಪಿಹೆಚ್‌ಆರ್‌ಎ KPHRA ವಾರ್ತೆ VARTHE

BANGALORE

ಕರ್ನಾಟಕ ಪ್ರದೇಶ ಹೋಟೆಲು ಮತ್ತು ಉಪಾಹಾರ ಮಂದಿರಗಳ ಸಂಘದ ವಾರ್ತಾ ಪತ್ರಿಕೆ

KPHRA VARTHE ENGLISH & KANNADA MONTHLY Reg. No./KA/BGW-1832/2021-2023 |
RNI No. KARBIL/2019/78029 | Posted at Bangalore PSO, Bangalore-560 026 | on 11th or 14th of every Month

ಸಂಪುಟ–24
ಸಂಚಿಕೆ – 1
ಜನವರಿ–2024
ಪುಟಗಳು–20
ಬೆಲೆ ರೂ. 10/–

VOLUME-24 | ISSUE - 1 | JANUARY 2024 | BANGALORE | PRICE - 10/-


ನಮ್ಮೆಲ್ಲಾ ಆತ್ಮೀಯರಿಗೆ
ಹೊಸ ವರ್ಷ 2024
ಹಾಗೂ
ಮಕರ ಸಂಕ್ರಾಂತಿಯ
ಹಾರ್ದಿಕ ಶುಭಾಶಯಗಳು

*Happy New Year 2024*
*&*
*Happy Sankranthi*





## ಹೋಟೆಲ್ ಉದ್ಯಮಕ್ಕೆ ಕೈಗಾರಿಕಾ ಸ್ಥಾನಮಾನ – ಮುಖ್ಯಮಂತ್ರಿಗಳಿಂದ ಆಶ್ವಾಸನೆ

ಸವಿರುಚಿ ಉತ್ತಮವಾದ

# ಮಾಡ್ರರ್ನ್ ಕಾಫಿ





*Buy The Best*

# MODERN COFFEE

**TRUST & QUALITY SINCE 1933**







## ೯೦ ವರ್ಷದ ಪರಂಪರೆಯ ಅನುಭವದ ಸ್ವಾದ

## 90 Years of Traditional Filter Coffee

**For Trade Enquiry Contact : +91 99805 25250**

**MODERN COFFEE CO**
**# 35,City Market Frontage, Bangalore-560 002.**
**Phone : 080 22872346 email: moderncoffee33@gmail.com**



President
**Sri B. Chandrashekar Hebbar**
Mob : 98451 17351

Hon. Secretary
**Sri G.K. Shetty**
Mob: 99800 00060

Tresurer
**Sri M.V. Raghavendra Rao**
Mob: 98800 93264

Vice President
**Sri Madhukar M Shetty**
Mob: 90350 56600

Vice President
**Sri Ravi Shastri**
Mob: 99452 30501

Vice President
**Sri M. Mahesh Shetty**
Mob: 94484 57367

Vice President
**Sri Sathyanath Shetty**
Mob: 94481 27649

Vice President
**Sri H.N. Umesh**
Mob: 94484 17158

Vice President
**Sri G.A. Deepananda**
Mob: 98456 66636

Joint Secretary
**Sri H.S. Prabhakar**
Mob: 99018 88548

Manager
Mob: 89706 40444

## ಪರಿವಿಡಿ

- ಅಧ್ಯಕ್ಷರ ನುಡಿ
- ಕಾರ್ಯದರ್ಶಿಯವರ ವರದಿ
- ಕೊಡಗಿನ ಪ್ರವಾಸೋದ್ಯಮ ಅಭಿವೃದ್ಧಿಗೆ ಸರಕಾರದ ಕಾಳಜಿ ಅಗತ್ಯ: ನಾಗೇಂದ್ರ ಪ್ರಸಾದ್
- Photo Gallary
- ಹೋಟೆಲು ಉದ್ಯಮವನ್ನು ಸಮಸ್ಯೆಗಳಿಂದ ಮುಕ್ತಿಗೊಳಿಸಲು ಸೂಕ್ತ ಕ್ರಿಯಾಯೋಜನೆ ಅಗತ್ಯವಿದೆ: ಕುಡ್ಪಿ ಜಗದೀಶ ಶೆಣೈ
- ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆಸಿದ ಮಾಧ್ಯಮಗೋಷ್ಠಿಯ ಮುಖ್ಯಾಂಶಗಳು
- ನಿಮ್ಮ ಮಿತ್ರ – ಸುಬ್ರಹ್ಮಣ್ಯ ಆರ್. ತಂತ್ರಿ
- Photo Gallary
- ................
- ................

## ಸಂಪಾದಕೀಯ.......

ಕರ್ನಾಟಕ ರಾಜ್ಯ ಹೋಟೆಲುಗಳ ಸಂಘದ ಎಲ್ಲ ಸದಸ್ಯರಿಗೆ ವಂದನೆಗಳು.

2023 ಕಳೆದು 2024ನೇ ನೂತನ ಕ್ಯಾಲೆಂಡರ್ ವರ್ಷವು ನಮ್ಮೆದುರು ತೆರೆದುಕೊಳ್ಳುತ್ತಿದೆ. ಮತ್ತೊಂದು ವರ್ಷವನ್ನು ನಾವು ಸ್ವಾಗತಿಸುತ್ತಿದ್ದೇವೆ. ಹೊಸ ವರ್ಷವು ನಮ್ಮ ಹೋಟೆಲು ಉದ್ಯಮದಾರರಿಗೆ ಶುಭವನ್ನುಂಟುಮಾಡಲಿ ಎಂದು ಆಶಿಸುತ್ತೇನೆ.

ಕೆಪಿಹೆಚ್ಆರ್ಎ ವಾರ್ತೆಯನ್ನು ಇನ್ನಷ್ಟು ಸಂಪನ್ನಗೊಳಿಸಬೇಕಾದರೆ ನಿಮ್ಮಿಂದ ವಿಷಯಗಳು ಬರಬೇಕು. ಸಂಘ ನಮಗಾಗಿ ಏನು ಮಾಡಿದೆ ಎನ್ನುವುದಕ್ಕಿಂತ ಸಂಘಕ್ಕೆ ನಾವು ಏನು ಮಾಡಬಹುದು ಎಂಬುದನ್ನು ಯೋಚಿಸಿ. ನಮ್ಮಿಂದ ಸಂಘಕ್ಕೆ ಯಾವ ರೀತಿಯ ಸ್ಪಂದನೆ ನೀಡಬಹುದೆಂಬುದನ್ನು ಚಿಂತಿಸಿ. ಸಂಘವೆಂದರೆ ನಮ್ಮ ಮನೆ ಇದ್ದ ಹಾಗೆ. ಅದರೆ ಗೋಡೆ ಸೂರು ಗಟ್ಟಿಯಾಗಿದ್ದರೆ ಅದರಡಿಯಲ್ಲಿ ನಾವು ಆಶ್ರಯ ಪಡೆಯಬಹುದು. ಸಂಘವನ್ನು ಬಲಗೊಳಿಸೋಣ. ಅದರಿಂದ ನಮ್ಮ ಉದ್ಯಮಕ್ಕೆ ಬಲ ತುಂಬೋಣ.

ಹೋಟೆಲು ಉದ್ಯಮವು ನಿಮ್ಮಲ್ಲಿ ಹೇಗಿದೆ? ನಿಮ್ಮ ಜಿಲ್ಲೆಯ ಹೋಟೆಲು ಉದ್ಯಮದ ಮತ್ತು ಪ್ರವಾಸೋದ್ಯಮದ ವೈಶಿಷ್ಟ್ಯಗಳೇನು? ನಿಮಗೆ ಉದ್ಯಮದಲ್ಲಿ ಎದುರಾಗುವ ಸಮಸ್ಯೆಗಳೇನು? ಅಗತ್ಯವಾಗಿರುವ ಸೌಲಭ್ಯಗಳೇನು? ಕೊರತೆಗಳೇನು? ಸರಕಾರದಿಂದ ಸಿಗಬೇಕಾದ ಸೌಲಭ್ಯಗಳೇನು? ನಮ್ಮ ಸಂಘವು ಸದಸ್ಯರಿಗಾಗಿ ಏನು ಮಾಡಬೇಕು? ಇವೆಲ್ಲ ನೀವೇ ಹೇಳಬೇಕಾದ ಸಂಗತಿಗಳು.

ಹೋಟೆಲು ಉದ್ಯಮದ ಒಳಹೊರಗುಗಳನ್ನು, ನೋವು ನಲಿವುಗಳನ್ನು ಬಿಂಬಿಸಲಿಕ್ಕೆ ನಮ್ಮ ಮುಖವಾಣಿ ಇರುವುದೆಂಬುದನ್ನು ನೆನಪಿಟ್ಟುಕೊಳ್ಳಿ. ನಿಮ್ಮ ವಿಚಾರಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಿ. ನಾವು ರಾಜ್ಯದೆಲ್ಲೆಡೆಗೆ ಹಂಚುತ್ತೇವೆ. ಸರಕಾರದ ಗಮನಕ್ಕೆ ತರಬೇಕಾದ ವಿಷಯವಾಗಿ ಮನವಿ ಸಲ್ಲಿಸೋಣ.

ಪತ್ರಿಕೆಯನ್ನು ಸಂಪನ್ನಗೊಳಿಸಬೇಕಾದರೆ ನೀವು ಇದರ ಭಾಗವಾಗಬೇಕು. ಬರೆಯಬೇಕು. ಪುಟಗಳನ್ನು, ವಿಷಯಗಳನ್ನು ಹೆಚ್ಚಿಸಬೇಕು. ಹಾಗೆಯೇ ಪತ್ರಿಕೆಯು ಸಂಘಕ್ಕೆ ಹೊರೆಯಾಗದಂತೆ ಜಿಲ್ಲಾ ಕೇಂದ್ರಗಳಿಂದಲೂ ನಮಗೆ ಜಾಹೀರಾತುಗಳು ಬರಬೇಕು.

ಪತ್ರಿಕೆಗೆ ಜೊತೆಯಾಗಿ, ಕೈಯಾಸರೆಯಾಗಿ, ಸಹಕಾರ ನೀಡಿ, ಸಂಘವನ್ನು ಪತ್ರಿಕೆಯನ್ನು ಬೆಳೆಸಿ.

**ವೀರೇಂದ್ರ ಎನ್. ಕಾಮತ್** **ಮಧುಕರ್ ಶೆಟ್ಟಿ**

# ಅಧ್ಯಕ್ಷರ ನುಡಿ



ಬಿ. ಚಂದ್ರಶೇಖರ ಹೆಬ್ಬಾರ್

ಸದಸ್ಯ ಬಂಧುಗಳಿಗೆ ನಮಸ್ಕಾರ.

ಕರ್ನಾಟಕ ರಾಜ್ಯ ಹೋಟಲುಗಳ ಸಂಘ ಪುನಃ ಕಾರ್ಯಾಚರಣೆಯನ್ನು ಪ್ರಾರಂಭಿಸಿ ಕೆಲವು ತಿಂಗಳುಗಳಷ್ಟೆ ಆಗಿದೆ. ನಮ್ಮ ಕಾರ್ಯಾಲಯ ಇರುವುದು ಬೆಂಗಳೂರಿನಲ್ಲಿ. ಆದರೆ ಇದು ಇಡೀ ರಾಜ್ಯದ ಎಲ್ಲ ಜಿಲ್ಲೆಗಳ ಮತ್ತು ತಾಲ್ಲೂಕಗಳ ಹೋಟೆಲು ಸಂಘಗಳ ಮಾತೃ ಸಂಘದ ಸ್ಥಾನದಲ್ಲಿದೆ. ಹಾಗಾಗಿ ನಮ್ಮ ಕೇಂದ್ರ ಸಂಘವು ಹೆಚ್ಚಿನ ಕ್ರಿಯಾಶೀಲತೆಯಿಂದ ಮತ್ತು ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸಬೇಕಾಗಿದೆ.

ಎಲ್ಲ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಹೋಟೆಲುಗಳ ಪರಿಸ್ಥಿತಿ ಮತ್ತು ಸಮಸ್ಯೆಗಳು ಒಂದೇ ರೀತಿ ಇರುವುದಿಲ್ಲ. ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಸಮಸ್ಯೆಗಳನ್ನು ನಾವು ಕಾಣುತ್ತಿದ್ದೇವೆ. ಇಂತಹ ಸಮಸ್ಯೆಗಳ ಬಗ್ಗೆ ಕೇಂದ್ರ ಸಂಘಕ್ಕೆ ತಾನಾಗಿಯೇ ತಿಳಿಯುವುದಿಲ್ಲ. ನೀವು ಇಂತಹ ವಿಚಾರಗಳಿದ್ದರೆ ನಮಗೆ ತಿಳಿಸಬೇಕಾಗುತ್ತದೆ.

ನಮ್ಮ ಉದ್ಯಮವು ರಾಜ್ಯದ ವಿವಿಧೆಡೆಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಮತ್ತು ಅಡೆತಡೆಗಳ ನಿವಾರಣೆಗಾಗಿ ನಮ್ಮ ಸಂಘವು ಸದಾ ಚಿಂತಿಸುತ್ತದೆ. ಪ್ರತಿ ತಿಂಗಳೂ ನಮ್ಮ ಸಂಘವು ಕೊನೆಯ ಶುಕ್ರವಾರದಂದು ಕಾರ್ಯಕಾರಿ ಸಮಿತಿ ಸಭೆಯನ್ನು ಏರ್ಪಡಿಸುತ್ತದೆ. ಅಲ್ಲಿ ಹೋಟೆಲು ಉದ್ಯಮದ ವಿವಿಧ ಸಂಗತಿಗಳು ಚರ್ಚೆಗೆ ಬರುತ್ತವೆ.

ವಿವಿಧ ಜಿಲ್ಲೆಗಳಲ್ಲಿ ಮತ್ತು ತಾಲ್ಲೂಕುಗಳಲ್ಲಿ ಇರುವ ಹೋಟೆಲು ಸಂಘಗಳು ತಮ್ಮ ಸಭೆಗಳಲ್ಲಿ ತಮ್ಮ ಸಮಸ್ಯೆಗಳ ಬಗ್ಗೆ ಚರ್ಚಿಸಿ ಅವುಗಳನ್ನು ರಾಜ್ಯದ ವೇದಿಕೆಗೆ ತರಬೇಕಾಗುತ್ತದೆ. ಪ್ರತಿತಿಂಗಳ ಕೊನೆಯ ವಾರದಲ್ಲಿ ಬೆಂಗಳೂರಿನಲ್ಲಿ ನಡೆಯುವ ನಮ್ಮ ರಾಜ್ಯ ಸಂಘದ ಸಭೆಗಳಲ್ಲಿ ಎಲ್ಲ ಜಿಲ್ಲೆಗಳ ಮತ್ತು ತಾಲ್ಲೂಕು ಸಂಘಗಳ ಪದಾಧಿಕಾರಿಗಳು ಮತ್ತು ಪ್ರತಿನಿಧಿಗಳು ಭಾಗವಹಿಸುವ ಅವಕಾಶವಿದೆ. ಈ ಅವಕಾಶವನ್ನು ನೀವು ಉಪಯೋಗಿಸಿಕೊಂಡು ನಿಮ್ಮ ಸಮಸ್ಯೆಗಳನ್ನು ನಮ್ಮ ಸಂಘದ ಸಭೆಯಲ್ಲಿ ಚರ್ಚಿಸಬಹುದಾಗಿದೆ.

ಈ ಸಭೆಯಲ್ಲಿ ರಾಜ್ಯದ ಎಲ್ಲ ಪ್ರದೇಶಗಳಿಂದಲೂ ಪ್ರತಿನಿಧಿಗಳು ಭಾಗವಹಿಸುವ ಕಾರಣ, ಬೇರೆ ಬೇರೆ ಪ್ರದೇಶಗಳಲ್ಲಿ ಸಮಸ್ಯೆಗಳನ್ನು ನಿಭಾಯಿಸುವ ವಿಷಯವೂ ತಿಳಿಯುತ್ತದೆ. ಸರಕಾರದ ಗಮನಕ್ಕೆ ತರಬೇಕಾದ ವಿಷಯಗಳನ್ನು ನಮ್ಮ ಗಮನಕ್ಕೆ ಇಲ್ಲಿ ತರಬಹುದಾಗಿದೆ ಮತ್ತು ಚರ್ಚಿಸಬಹುದಾಗಿದೆ.

ರಾಜ್ಯದ ವಿವಿಧೆಡೆಗಳಲ್ಲಿ ಹೋಟೆಲು ಉದ್ಯಮಕ್ಕೆ ಸಂಬಂಧಿಸಿದಂತೆ ನಡೆಯುವ ವಿದ್ಯಮಾನಗಳನ್ನು ಮತ್ತು ಎದುರಾಗುವ ಕಾನೂನು ತೊಡಕುಗಳು, ಸಾರ್ವಜನಿಕ ಸಮಸ್ಯೆಗಳು, ಅಧಿಕಾರಿಗಳಿಂದ ಎದುರಾಗುವ ಸಮಸ್ಯೆಗಳನ್ನೂ ನಮ್ಮ ಗಮನಕ್ಕೆ ತಂದಲ್ಲಿ ಇಂತಹ ವಿಷಯಗಳನ್ನು ಪತ್ರಿಕೆಯ ಮೂಲಕವೂ ರಾಜ್ಯದ ಎಲ್ಲೆಡೆಯ ಹೋಟೆಲು ಉದ್ಯಮದಾರರಿಗೆ ತಲುಪಿಸಲು ಮತ್ತು ಅಭಿಪ್ರಾಯ ಪಡೆಯಲು ಅವಕಾಶವಾಗುತ್ತದೆ.

ನಮ್ಮ ಉದ್ಯಮವು 365 ದಿನವೂ ತೆರೆದಿರಲೇಬೇಕಾದ ಉದ್ಯಮವಾಗಿದೆ. ಕಳೆದ ಐವತ್ತು ವರ್ಷಗಳ ಹಿಂದೆ ಈ ಉದ್ಯಮ ಹೇಗಿತ್ತು? 25 ವರ್ಷಗಳ ಹಿಂದೆ ಹೇಗಿತ್ತು? ಈಗ ಹೇಗಿದೆ? ಮುಂದೆ ಹೇಗಿರಬಹುದು? ಎಂಬ ವಿಷಯಗಳನ್ನು ನಾವು ವಿಮರ್ಶೆ ಮಾಡಬೇಕಾದ ಸಂಕೀರ್ಣ ಕಾಲಘಟ್ಟದಲ್ಲಿ ಇದ್ದೇವೆ.

ನಮಗೆ ಈ ಉದ್ಯಮದಲ್ಲಿ ನುರಿತ ಕೆಲಸಗಾರರು ದೊರೆಯುವುದಿಲ್ಲ. ಸಿಕ್ಕಿದ ಅಶಿಕ್ಷಿತ ಸಿಬ್ಬಂದಿಗಳಿಗೆ ಸೂಕ್ತ ತರಬೇತಿ ನೀಡಿ ತಯಾರು ಮಾಡಬೇಕಾಗುತ್ತದೆ. ತರಬೇತಿ ಪಡೆದವರು ಹೆಚ್ಚು ಸಂಬಳ ಸಿಗುವಲ್ಲಿ ಹೋಗುತ್ತಾರೆ. ಮತ್ತೆ ಹೊಸ ಕೆಲಸಗಾರರಿಗೆ

ಹುಡುಕಾಡಬೇಕಾಗುತ್ತದೆ. ಈಗ ಕೈಯಳತೆಯಲ್ಲಿಯೇ ಉಪ್ಪು, ಹುಳಿ ಮೆಣಸು, ಮಸಾಲೆ ಹಾಕುವ ಕ್ರಮ ನಮ್ಮ ಉದ್ಯಮದಲ್ಲಿದೆ. ಮುಂದಿನ ದಿನಗಳಲ್ಲಿ ನುರಿತ ಕೆಲಸಗಾರರು ದೊರೆಯದೇ ಇದ್ದರೆ ಏನು ಮಾಡುವುದೆಂದು ನಾವೀಗಲೇ ಯೋಚಿಸಬೇಕು. ಈಗ ಅಲ್ಪ ಸ್ವಲ್ಪ ವಿದ್ಯೆ ಪಡೆದವರು ಈ ಉದ್ಯಮಕ್ಕೆ ಕಾರ್ಮಿಕರಾಗಿ ಬಂದಾರು. ಇನ್ನು ಹತ್ತಿಪ್ಪತ್ತು ವರ್ಷಗಳ ಬಳಿಕ ಎಲ್ಲರೂ ವಿದ್ಯಾವಂತರೇ ಆದಾಗ ನಾವು ಅವರನ್ನು ಕೆಲಸಕ್ಕಿಟ್ಟುಕೊಳ್ಳುವ ರೀತಿಯ ವಾತಾವರಣವನ್ನು ಈ ಉದ್ಯಮದಲ್ಲಿ ಮೂಡಿಸಬೇಕು.

ಕೈಯಳತೆಯಲ್ಲದೆ, ತೂಕ ಮತ್ತು ಅಳತೆಯ ಲೆಕ್ಕದಲ್ಲಿ ಎಲ್ಲ ದಿನಸಿ ಮತ್ತು ಸಾಂಬಾರ ಪದಾರ್ಥಗಳನ್ನು ಬಳಸುವ ಕ್ರಮವನ್ನು ರೂಢಿಸಬೇಕು. ವಿದ್ಯಾವಂತ ಸಿಬ್ಬಂದಿಗಳು ನಮ್ಮ ಉದ್ಯಮಕ್ಕೆ ಬರುವಂತೆ ಮತ್ತು ಇಲ್ಲಿ ಇರುವಂತೆ ಅಗತ್ಯ ತರಬೇತಿ, ಸೌಲಭ್ಯಗಳನ್ನು ನಾವು ನೀಡಬೇಕು. ಹೊರತಾಗಿ ಈ ಉದ್ಯಮವನ್ನು ಉಳಿಸಿ ಬೆಳೆಸುವುದು ಕಷ್ಟ.

ನಮ್ಮ ರಾಜ್ಯದಲ್ಲಿ, ಬೆಂಗಳೂರಿನಲ್ಲಿ ಜಗತ್ತಿನ ಎಲ್ಲ ಪ್ರದೇಶಗಳ ರುಚಿಯೂ ದೊರೆಯುತ್ತಿದೆ. ಇದಕ್ಕೆ ಸರಿಯಾಗಿ ಶುಚಿಯನ್ನು, ಉತ್ತಮ ಸೇವೆಯನ್ನು ನೀಡುವ ಗುರುತರ ಜವಾಬ್ದಾರಿ ನಮ್ಮ ಮುಂದಿದೆ. ಅದಕ್ಕೆ ಸರಿಯಾದ ಬೆಲೆಯನ್ನು ನಾವು ಇಟ್ಟರೆ ಮಾತ್ರ ಹೋಟೆಲು ಉದ್ಯಮವನ್ನು ಉಳಿಸಿಕೊಳ್ಳಬಹುದು. ಸರಿಯಾದ ಲೆಕ್ಕಾಚಾರ ಮಾಡದೇ ವ್ಯಾಪಾರ ಮಾಡುತ್ತಾ ದರ ಸ್ಪರ್ಧೆಗಿಳಿದರೆ ಅಂತಹ ವ್ಯಾಪಾರಗಳು ಹೆಚ್ಚು ಕಾಲ ನಡೆಯುವುದಿಲ್ಲ.

ನಾವೆ ಹೋಟೆಲಿಗೆ ಗ್ರಾಹಕರಾಗಿ ಹೋದಾಗ ಹೋಟೆಲಿನಂದ ಎಂತಹ ಸೇವೆಯನ್ನು, ಶುಚಿರುಚಿಯನ್ನು, ಸೌಲಭ್ಯಗಳನ್ನು ಬಯಸುತ್ತೇವೊ ಅಂತಹ ಸೇವೆ ನಮ್ಮಿಂದ ಗ್ರಾಹಕರು ಪಡೆಯುವಂತಾಗುವುದು ಮುಖ್ಯ.

ಈಗ ಇರುವ ಹೋಟೆಲುಗಳಲ್ಲಿ ಶೇ.90% ರಷ್ಟು ಮಾಲೀಕರ ಮುಂದಿನ ಪೀಳಿಗೆ ಈ ಉದ್ಯಮಕ್ಕೆ ಬರುವುದಿಲ್ಲ. ಈಗಿನ ಮಾಲೀಕರುಗಳು ಮುಂದಿನ ಒಂದೆರಡು ದಶಕಗಳಲ್ಲಿ ನಿವೃತ್ತರಾಗುತ್ತಾರೆ. ಈಗ ಇರುವವರೆಲ್ಲ ನುರಿತವರೇ. ಮುಂದೇನು? ಪ್ರಶ್ನೆ ಕೇಳದೇ ಉತ್ತರ ಸಿಗುವುದಿಲ್ಲ. ಹಾಗಾಗಿ ಪ್ರಶ್ನೆ ಕೇಳಲು ರಾಜ್ಯದ ಮೂಲೆ ಮೂಲೆಯ ಹೋಟೆಲು ಸಂಘಗಳ ಪ್ರತಿನಿಧಿಗಳೂ ನಮ್ಮ ಸಂಘದ ಪ್ರತಿತಿಂಗಳ ಸಭೆಯಲ್ಲಿ ಭಾಗವಹಿಸಿ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕು.

ಪ್ರತಿ ತಿಂಗಳ ಕೊನೆಯ ಶುಕ್ರವಾರ ಅಥವಾ ಬದಲಾವಣೆ ಇದ್ದಲ್ಲಿ ಬೇರೆ ಅನುಕೂಲವಾದ ದಿನ ಎಲ್ಲರಿಗೆ ಅನುಕೂಲವಾಗುವಂತೆ ಸಭೆಯನ್ನು ಏರ್ಪಡಿಸಲಾಗುತ್ತದೆ. ಈ ಬಗ್ಗೆ ಸಾಕಷ್ಟು ಮುಂಚಿತವಾಗಿ ಸದಸ್ಯರಿಗೆ ತಿಳಿಸಲಾಗುತ್ತದೆ. ಎಲ್ಲರೂ ಭಾಗವಹಿಸಬೇಕು ಎಂಬುದು ನಮ್ಮ ಅಪೇಕ್ಷೆಯಾಗಿದೆ.

ಸಂಘದ ಸಮ್ಮೇಳನ ನಡೆಯದೇ ಹಲವು ವರ್ಷಗಳೇ ಕಳೆದಿದೆ. ಸಂಘದಿಂದ ಪ್ರತಿವರ್ಷ ನಡೆಸುತ್ತಿದ್ದ ಆತಿಥ್ಯರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ನಡೆಸಬೇಕೆಂಬ ಅಭಿಪ್ರಾಯವೂ ಅನೇಕರಿಂದ ವ್ಯಕ್ತವಾಗಿದೆ.


ಬಳ್ಳಾರಿ ಜಿಲ್ಲಾ ಹೋಟೆಲು ಸಂಘವು ಸಮಾರಂಭದ ಆತಿಥೇಯತ್ವ ವಹಿಸಲು ಮುಂದಾಗಿದೆ.

ರಾಜ್ಯ ಮಟ್ಟದ ಸಮಾರಂಭವೆಂದರೆ ಇಡೀ ರಾಜ್ಯದ ಹೋಟೆಲು ಉದ್ಯಮದಾರರು ಭಾಗವಹಿಸುವ ಕಾರಣ ಹೇಗೆ ವ್ಯವಸ್ಥೆ ಮಾಡುವುದೆಂಬ ಬಗ್ಗೆ ಜಿಲ್ಲಾ ಸಂಘದ ಪದಾಧಿಕಾರಿಗಳು ಅಲ್ಲಿನ ಸಭೆಯಲ್ಲಿ ಚರ್ಚಿಸಿ ರೂಪುರೇಷೆ ಸಿದ್ಧಪಡಿಸಿ, ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವ ಮತ್ತು ಇತರ ಏರ್ಪಾಡುಗಳನ್ನು ಮಾಡುವ ಕುರಿತು ತೀರ್ಮಾನಿಸಿ ವಿವರಗಳನ್ನು ನಮಗೆ ತಿಳಿಸಿದರೆ ಮುಂದುವರಿಯಬಹುದು.

ನಮ್ಮಸಂಘದ ಸದಸ್ಯರಾದ ಶ್ರೀ ವಾಸುದೇವ ಅಡಿಗರು ಸಿಂಗಾಪುರದಲ್ಲಿ ಹೋಟೆಲು ಸ್ಥಾಪಿಸಿರುವ ಬಗ್ಗೆ ಸಾಮಾಜಿಕ ಜಾಲತಾಣದ ಸುದ್ದಿಗಳ ಮೂಲಕ ತಿಳಿಯಿತು. ಅವರಿಗೆ ಅಭಿನಂದನೆಗಳು.

ಹಾಗೂ ಸಂಘದ ಸದಸ್ಯರೆಲ್ಲರಿಗೂ ಶುಭಹಾರೈಕೆಗಳು.

**ಬಿ. ಚಂದ್ರಶೇಖರ ಹೆಬ್ಬಾರ್**


Swathi
GROUP
HOTELS | RESTAURANTS | BANQUETS
OUTDOOR CATERING | EVENT VENUES
Atithi Devo Bhava
Attide Boutique Hotel
Swathi Group of Restaurants
Swathi Caterers
For Room Reservation logon to
www.attidehotels.com
Corporate Office
45, West of Chord Road, Rajaji Nagar, Bengaluru - 560086
99000 32100 | 99805 60077 | 99000 41852 | 99000 32105
swathigroup.co.in

# ಕಾರ್ಯದರ್ಶಿಯವರ ವರದಿ



**ಸದಸ್ಯ ಬಂಧುಗಳೇ,**

ಕರ್ನಾಟಕ ರಾಜ್ಯ ಹೋಟೆಲ್‌ಗಳ ಸಂಘದ ವತಿಯಿಂದ ತಮ್ಮೆಲ್ಲರಿಗೂ ಹೊಸ ವರ್ಷದ ಹಾಗೂ ಸಂಕ್ರಾಂತಿಯ ಹಾರ್ದಿಕ ಶುಭಾಶಯಗಳು.

ಹೋಟೆಲ್ ಉದ್ಯಮದಲ್ಲಿ 20ಕ್ಕೂ ಹೆಚ್ಚು ಕೆಲಸಗಾರರು ಇರುವ ಹೋಟೆಲ್ಗಳಿಗೆ ಉದ್ಯಮ ಸ್ಥಾನ (INDUSTRY STATUS) ನೀಡಬೇಕೆಂದು ಕರ್ನಾಟಕ ಟೂರಿಸಂ ಸಮಿತಿ ಮತ್ತು ಕರ್ನಾಟಕ ವಾಣಿಜ್ಯ ಮಂಡಳಿ ಮುಖಾಂತರ ಪ್ರಯತ್ನಿಸುತ್ತಿದ್ದೇವೆ.

ಕನಿಷ್ಠ ವೇತನ ಈಗಾಗಲೇ ಜಾರಿಯಲ್ಲಿದ್ದು ಮರು ಪರಿಶೀಲನೆಯಾಗಿ ವೇತನ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಸರ್ಕಾರ ಹೊರಡಿಸಿದ್ದ 34 ನೋಟಿಫಿಕೇಶನ್ ಗಳನ್ನು ನ್ಯಾಯಾಲಯವು ರದ್ದುಪಡಿಸಿ ಮರು ಪರಿಶೀಲನೆಗಾಗಿ ಆದೇಶಿಸಿರುವ ಹಿನ್ನೆಲೆಯಲ್ಲಿ ಕಾನೂನಾತ್ಮಕವಾಗಿ ಹೋರಾಟ ನಡೆಸುವ ಪರಿಸ್ಥಿತಿ ಎದುರಾಗುವ ಸಾಧ್ಯತೆ ಇರುವುದರಿಂದ ಉದ್ಯಮಬಾಂಧವರು ಇದರಲ್ಲಿ ಆರ್ಥಿಕವಾಗಿ ಭಾಗವಹಿಸಬೇಕಾದ ಅಗತ್ಯತೆ ಇದೆ.

ಕರ್ನಾಟಕದ ಖ್ಯಾತ ಹೋಟೆಲ್ ಉದ್ಯಮಿ ಮತ್ತು ರಾಜ್ಯ ಹೋಟೆಲ್‌ಗಳ ಸಂಘದ ಪೂರ್ವ ಪದಾಧಿಕಾರಿಗಳಾಗಿದ್ದ ಶ್ರೀ ಪ್ರಕಾಶ್ ಶೆಟ್ಟಿ ಅವರ ನೇತೃತ್ವದಲ್ಲಿ ನಡೆದ ಕರಾವಳಿ ಭಾಗದ ಪ್ರಸಿದ್ಧ ಕ್ರೀಡೆಯಾದ ಕಂಬಳ ಬೆಂಗಳೂರಿನಲ್ಲಿ ನವೆಂಬರ್ 25, 26ರಂದು ಅದ್ದೂರಿಯಾಗಿ ನಡೆಯಿತು ಈ ಕಾರ್ಯಕ್ರಮವನ್ನು ಎಂದೆಂದೂ ಕಂಡರಿಯದ ರೀತಿಯಲ್ಲಿ ನಡೆಸಲು ತನು ಮನ ಧನದೊಂದಿಗೆ ಸಹಕರಿಸಿದ ತಮ್ಮೆಲ್ಲರಿಗೂ ನನ್ನ ಧನ್ಯವಾದಗಳು.

ದಕ್ಷಿಣ ಭಾರತ ಹೋಟೆಲ್ ಮತ್ತು ಉಪಹಾರ ಗೃಹಗಳ ಸಂಘವು (SIHRA) ಜನವರಿ ತಿಂಗಳ 19, 20, 21 ರಂದು ಆಂಧ್ರದ ವಿಶಾಖಪಟ್ಟಣದಲ್ಲಿ ಹೋಟೆಲ್ ಉದ್ಯಮಿಗಳಿಗಾಗಿ ಒಂದು ಉನ್ನತಮಟ್ಟದ ಸಮಾವೇಶವನ್ನು ಆಯೋಜಿಸಿದ್ದಾರೆ. ಇದರಲ್ಲಿ ಅನುಭವಿ ಹೋಟೆಲ್ ಉದ್ಯಮಿಗಳಿಂದ ಉದ್ಯಮದ ಬಗ್ಗೆ ಚರ್ಚೆ, ನುರಿತ ಬಾಣಸಿಗರಿಂದ (CELEBRITY CHEF) ವಿಶೇಷ ಖಾದ್ಯಗಳ ಬಗ್ಗೆ ಸಂವಾದ ಇತ್ಯಾದಿಗಳು ಇರುತ್ತವೆ. ತಾವೆಲ್ಲರೂ ಈ ಸಮಾವೇಶದಲ್ಲಿ ಭಾಗವಹಿಸಿ ತಮ್ಮ ಅನುಭವಗಳನ್ನು ಹಂಚಿಕೊಂಡು ಇತರರ ಅನುಭವ ಗಳನ್ನು ತಿಳಿದುಕೊಳ್ಳುವ ಉತ್ತಮ ಅವಕಾಶವನ್ನು ಬಳಸಿ ಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕೋರುತ್ತೇನೆ.

ಸಂಘದ ಬೆಳವಣಿಗೆಗೆ ಸದಸ್ಯತ್ವ ,ಮತ್ತು ಸಂಘದ ಪತ್ರಿಕೆಯ ಬೆಳವಣಿಗೆಗೆ ಜಾಹೀರಾತಿನ ಪ್ರಾಯೋಜಕತ್ವ ಬಲುಮುಖ್ಯ. ಜಿಲ್ಲಾ ಸಂಘಗಳು ತಮ್ಮ ಜಿಲ್ಲಾ ಸಂಘದ ವತಿಯಿಂದ ಪತ್ರಿಕೆಗೆ ಹೆಚ್ಚಿನ ಜಾಹೀರಾತು ತಮ್ಮ ಜಿಲ್ಲೆಗಳ ಸಂಘಗಳಲ್ಲಿ ನಡೆದ ಸಭೆ ಸಮಾರಂಭಗಳ ವರದಿ, ಫೋಟೋ ಇತ್ಯಾದಿಗಳನ್ನು ಕಾಲಕಾಲಕ್ಕೆ ಕಳುಹಿಸಿದ್ದಲ್ಲಿ ಪತ್ರಿಕೆಯನ್ನು ಇನ್ನೂ ಸುಂದರವಾಗಿ ರೂಪಿಸಬಹುದು.

ರಾಜ್ಯ ಸಂಘದ ಪ್ರಾಂತೀಯ ಸಭೆಯನ್ನು ನಡೆಸಲು ಉಪಾಧ್ಯಕ್ಷರುಗಳಾದ ಸಾಗರದ ಶ್ರೀ ಹೆಚ್‌ಎನ್ ಉಮೇಶ್ ಮತ್ತು ಮೈಸೂರಿನ ಶ್ರೀ ರವಿ ಶಾಸ್ತ್ರಿ ಯವರು ಆಸಕ್ತರಾಗಿ ರುವುದು ಸಂತೋಷದ ವಿಷಯ. ಮುಂದೆ ಇದರ ಬಗ್ಗೆ ವಿವರವಾಗಿ ತಿಳಿಸುತ್ತೇವೆ.

ತಮ್ಮ ವಿಶ್ವಾಸಿ,

**ಜಿ.ಕೆ.ಶೆಟ್ಟಿ,** ಗೌರವ ಕಾರ್ಯದರ್ಶಿ

# ಕೊಡಗಿನ ಪ್ರವಾಸೋದ್ಯಮ ಅಭಿವೃದ್ಧಿಗೆ ಸರಕಾರದ ಕಾಳಜಿ ಅಗತ್ಯ: ನಾಗೇಂದ್ರ ಪ್ರಸಾದ್



ಕೊಡಗು ಪ್ರವಾಸೋದ್ಯಮ ಕ್ಷೇತ್ರಕ್ಕೆ ಹೇಳಿ ಮಾಡಿಸಿದಂತಹ ಜಿಲ್ಲೆಯಾಗಿದ್ದು ಅನೇಕ ಪ್ರವಾಸೋದ್ಯಮ ಆಕರ್ಷಣೆಯ ಕೇಂದ್ರಗಳು ಇಲ್ಲಿವೆ. ಆದರೆ ಈ ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಯ ಬಗ್ಗೆ ಸರಕಾರದ ಪ್ರೋತ್ಸಾಹದ ಕೊರತೆಯಿದೆ ಎಂದು ಕೊಡಗು ಜಿಲ್ಲಾ ಹೋಟೆಲು ಉದ್ಯಮ ಸಂಘದ ಅಧ್ಯಕ್ಷ ಶ್ರೀ ನಾಗೇಂದ್ರ ಪ್ರಸಾದ್ ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಕೆಪಿಹೆಚ್ಆರ್ಎ ವಾರ್ತೆಯೊಂದಿಗೆ ಮಾತನಾಡಿದ ಅವರು ಕೊಡಗಿನಲ್ಲಿ ಐದು ತಾಲ್ಲೂಕುಗಳಿದ್ದು ಈವರೆಗೂ ಕೇವಲ ಮಡಿಕೇರಿ ಮತ್ತು ಕುಶಾಲನಗರ ಮಾತ್ರವೇ ಪ್ರವಾಸೋದ್ಯಮ ದೃಷ್ಟಿಯಿಂದ ಗುರುತಿಸಲ್ಪಡುತ್ತಿತ್ತು. ಎಲ್ಲ ತಾಲ್ಲೂಕುಗಳಲ್ಲೂ ಪ್ರವಾಸಿಗರನ್ನು ಆಕರ್ಷಿಸಬಲ್ಲ ಸುಮಾರು 25–30 ಕೇಂದ್ರಗಳಿದ್ದು ಮೂಲ ಸೌಲಭ್ಯಗಳನ್ನು, ಸೂಕ್ತ ಪ್ರಚಾರವನ್ನು ನೀಡಿದಲ್ಲಿ ಕೊಡಗು ಜಿಲ್ಲೆಯು ಆತಿಥ್ಯೋದ್ಯಮ ಕ್ಷೇತ್ರದಿಂದ ಸರಕಾರಕ್ಕೆ ಗಣನೀಯ ಆದಾಯವನ್ನು ಒದಗಿಸಬಲ್ಲುದು ಎಂದು ಅವರು ಹೇಳಿದರು.

ನಾಲ್ಕು ವರ್ಷಗಳ ಹಿಂದೆ ಭೂಕುಸಿತ, ರಸ್ತೆ ಕುಸಿತ ಇತ್ಯಾದಿ ಸಮಸ್ಯೆಗಳಿಂದ ತತ್ತರಿಸಿದ್ದ ಕೊಡಗು ಜಿಲ್ಲೆಯು ಇದೀಗ ಪುನಶ್ಚೇತನ ಕಾರ್ಯಗಳಿಂದ ಪ್ರಗತಿ ಕಂಡಿದೆ. ಬಳಿಕ ಕೋವಿಡ್ ಭೂತವು ಮತ್ತೆ ಉದ್ಯಮರಂಗವನ್ನು ಹದಗೆಡಿಸಿತಾದರೂ ಇದೀಗ ಚೇತರಿಸಿಕೊಳ್ಳುತ್ತಿದೆ. ಸರಕಾರವು ಕನಿಷ್ಠ ಬೆಂಬಲವನ್ನಾದರೂ ನೀಡಿದಲ್ಲಿ ಕೊಡಗಿನ ಪ್ರವಾಸೋದ್ಯಮ ಉತ್ತಮ ಪ್ರಗತಿ ಕಾಣಬಹುದು ಎಂದವರು ಹೇಳಿದರು.

ಕೊಡಗಿನಲ್ಲಿ ಸುಮಾರು 250 ಹೋಟೆಲುಗಳು ಮತ್ತು ವಸತಿಗೃಹಗಳು, 25ಕ್ಕೂ ಹೆಚ್ಚು ರೆಸಾರ್ಟ್‌ಗಳು ಮತ್ತು ನಾಲ್ಕು ಸಾವಿರದಷ್ಟು ಹೋಮ್ ಸ್ಟೇಗಳು ಇವೆ. ಒಟ್ಟು ಸೇರಿಸಿದರೆ ಸುಮಾರು 30,000ಕ್ಕೂ ಹೆಚ್ಚು ಕೊಠಡಿಗಳಿವೆ. ವಾರಾಂತ್ಯದಲ್ಲಿ ಕೊಡಗಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಒಂದೂವರೆ ಲಕ್ಷಗಳಷ್ಟಿವೆ. ಇಡೀ ತಿಂಗಳಿಗೆ ಹತ್ತು ಲಕ್ಷಕ್ಕಿಂತ ಹೆಚ್ಚು ಪ್ರವಾಸಿಗರು ಕೊಡಗಿನ ವಿವಿಧ ಸ್ಥಳಗಳಿಗೆ ಭೇಟಿ ನೀಡುತ್ತಿದ್ದಾರೆ. ಕೇವಲ ಖಾಸಗಿ ಆತಿಥ್ಯೋದ್ಯಮ ಸಂಸ್ಥೆಗಳು ಮಾಡುವ ಪ್ರಚಾರದಿಂದಲೇ ಇಷ್ಟರ ಮಟ್ಟಿಗೆ ಉದ್ಯಮ ನಡೆಯುತ್ತಿದೆ. ಸರಕಾರದ ಬೆಂಬಲ ದೊರೆತಲ್ಲಿ ಇದರ ಎರಡರಷ್ಟು ಪ್ರಗತಿ ಕಾಣುವುದು ಸಾಧ್ಯವಿದೆ.

ಕರಿಕೆಯಿಂದ ಭಾಗಮಂಡಲದ ವರೆಗಿನ 23 ಕಿ.ಮೀ.ಗಳಷ್ಟು ವ್ಯಾಪ್ತಿಯಲ್ಲಿ ಕಚ್ಚಾ ರಸ್ತೆಯಿದ್ದು ಈ ಭಾಗದಲ್ಲಿ ಉದ್ದಕ್ಕೂ 22 ಜಲಪಾತಗಳು ಪ್ರಕೃತಿ ಸೌಂದರ್ಯವನ್ನು ನಮ್ಮೆದುರು ತೆರೆದಿಡುತ್ತವೆ. ಆದರೆ ಸೂಕ್ತವಾದ ರಸ್ತೆ, ಅಗತ್ಯವಿರುವ ಕರೆ ಪಾರ್ಕಿಂಗ್ ವ್ಯವಸ್ಥೆ, ಮತ್ತು ಅಲ್ಲಲ್ಲಿ ಪ್ರವಾಸಿಗರಿಗೆ ನಿಲುಗಡೆ ಹಾಗೂ ತಿಂಡಿತೀರ್ಥಗಳ, ಛಾಯಾಗ್ರಹಣದ ಅನುಕೂಲತೆ ಗಳು ಇದ್ದಲ್ಲಿ ಜನತೆ ಈ ಕಡೆ ಆಕರ್ಷಿಸಲ್ಪಡುತ್ತಾರೆ.

ಜಿಲ್ಲೆಯ ವಿವಿಧ ತಾಲ್ಲೂಕು ಕೇಂದ್ರಗಳಲ್ಲೂ ಪಾರ್ಕಿಂಗ್ ವ್ಯವಸ್ಥೆಗಳು ಮತ್ತು ಅಗಲ ರಸ್ತೆಗಳು ಇಲ್ಲದಿರುವುದರಿಂದ ವಾರಾಂತ್ಯಗಳಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಿರುವ ಕಾರಣ ಜಿಲ್ಲೆಯ ಜನ ವಾಹನ ಪಾರ್ಕಿಂಗ್‌ಗೆ ತೊಂದರೆಯಾಗುತ್ತದೆ ಮತ್ತು ಹೆಚ್ಚಿನ ಸಮಯ ವಾಹನ ಪ್ರಯಾಣದಲ್ಲಿ ವ್ಯರ್ಥವಾಗುತ್ತದೆ ಎಂಬ ಕಾರಣ ಹೊರಗೆ ಬರಲು ಹಿಂದೇಟು ಹಾಕುತ್ತಿದ್ದಾರೆ. ತಾಲ್ಲೂಕು ಕೇಂದ್ರಗಳಲ್ಲಿ ರಸ್ತೆಗಳನ್ನು ಅಗಲಗೊಳಿಸಿ, ಸೂಕ್ತ ಪಾರ್ಕಿಂಗ್ ವ್ಯವಸ್ಥೆಗಳನ್ನು ಕಲ್ಪಿಸಿದಲ್ಲಿ ವಾರಾಂತ್ಯದಲ್ಲಿ ಸ್ಥಳೀಯರು ಹೋಟೆಲುಗಳಿಗೆ ಮತ್ತು ಅಗತ್ಯ ವಸ್ತುಗಳ ಖರೀದಿಗಾಗಿ ಪೇಟೆಗೆ ಬಂದಾರು.

ಜಿಲ್ಲಾ ಕೇಂದ್ರದಿಂದ ಎಲ್ಲ ತಾಲ್ಲೂಕುಗಳಿಗೂ ಸಾರಿಗೆ ವ್ಯವಸ್ಥೆ ಬಹಳ ಸುವ್ಯವಸ್ಥಿತವಾಗಿರುವುದು ನಮ್ಮ ಹೆಮ್ಮೆ. ಅಗತ್ಯವಿರುವ ಕೆಲವೇ ಕೆಲವು ಕ್ರಮಗಳನ್ನು ಕೈಗೊಂಡರೆ ನಮ್ಮ ಪ್ರವಾಸೋದ್ಯಮ ಮತ್ತು ಜತೆಯಲ್ಲೇ ಹೋಟೆಲು ಉದ್ಯಮ ಇನ್ನಷ್ಟು ಚೇತರಿಸಿಕೊಂಡು ಹಿಂದೆ ಸಂಭವಿಸಿದ ಉತ್ಪಾತಗಳ ನಷ್ಟದಿಂದ ಹೊರಬರಲು ಸಾಧ್ಯವಿದೆ.

ಕರ್ನಾಟಕ ರಾಜ್ಯ ಹೋಟೆಲು ಸಂಘವು ಈ ನಿಟ್ಟಿನಲ್ಲಿ ವಿಶೇಷ ವಾಗಿ ಗಮನ ಹರಿಸಿ ಮನವಿ ಸಿದ್ಧಪಡಿಸಿ ಸರಕಾರಕ್ಕೆ ಸಲ್ಲಿಸ ಬೇಕಾಗಿದೆ. ಪ್ರಾಕೃತಿಕ ಸೌಂದರ್ಯದ ಖನಿಯಾಗಿರುವ ಕೊಡಗಿನಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುವುದಕ್ಕೆ ಅಗತ್ಯ ವಾದ ಕ್ರಮಗಳನ್ನು ರಾಜ್ಯ ಸರಕಾರವು ಕೈಗೊಳ್ಳಬೇಕೆಂದು ನಮ್ಮ ಜಿಲ್ಲಾ ಆತಿಥ್ಯೋದ್ಯಮದ ಆಶಯವಾಗಿದೆ ಎಂದು ನಾಗೇಂದ್ರ ಪ್ರಸಾದ್ ಅವರು ಅಭಿಪ್ರಾಯ ಪಟ್ಟಿದ್ದಾರೆ.

# Photo Gallary



*B Y Raghavendra's Visit Sagar Assn.*



*H N Umesh honoring D Y Raghavendra*



*Vice President Sri Satyanath Shetty with other Members of Gulbarga Association*



*EC Member Sri Narayana Gowda being honoured*



ತುಮಕೂರು ಉಪವಿಭಾಗದ ಕಾರ್ಮಿಕ ಅಧಿಕಾರಿಗಳಾದ ಶ್ರೀಮತಿ ತೇಜಾವತಿ ಕೆ.ಎಲ್.ಎಸ್. ಮೇಡಮ್‌ರವರು ಮತ್ತು ಇತರೆ ಅಧಿಕಾರಿಗಳು ತುಮಕೂರು ಹೋಟೆಲ್ ಅಸೋಸಿಯೇಷನ್‌ಗೆ ಭೇಟಿ ನೀಡಿದ ಸಂದರ್ಭ.

# Photo Gallary



House Warming Ceremony of Sri  Shyamaraju, President SIHRA



Hon Secretary Sri G K Shetty and EC MemberSri P C Rao
Welcoming Home Secretary Sri Umashankar



President & Treasurer with
Sri Kota Srinivas Poojari



T N Raghavendra Rao
honored by Governor




president Sri Chandrashekar Hebbar honouring sri K N Vasudeva Adiga

# ಹೋಟೆಲು ಉದ್ಯಮವನ್ನು ಸಮಸ್ಯೆಗಳಿಂದ ಮುಕ್ತಿಗೊಳಿಸಲು ಸೂಕ್ತ ಕ್ರಿಯಾಯೋಜನೆ ಅಗತ್ಯವಿದೆ: ಕುಡ್ವಿ ಜಗದೀಶ ಶೆಣೈ

ಮಂಗಳೂರು: ವಿವಿಧ ವಸ್ತುಗಳ ಬೆಲೆ ಏರಿಕೆಯೂ ಸೇರಿದಂತೆ ಹಲವಾರು ಸಮಸ್ಯೆಗಳಿಂದ ಬಳಲುತ್ತಿರುವ ಹೋಟೆಲು ಉದ್ಯಮ ಚೇತರಿಸಿಕೊಳ್ಳಬೇಕಾದರೆ ಸರಕಾರದ ಬೆಂಬಲ ಅಗತ್ಯ ಎಂದು ದಕ್ಷಿಣ ಕನ್ನಡ ಜಿಲ್ಲಾ ಹೋಟೆಲು ಮತ್ತು ಉಪಾಹಾರ ಮಂದಿರಗಳ ಸಂಘದ ಅಧ್ಯಕ್ಷ ಶ್ರೀ ಕುಡ್ವಿ ಜಗದೀಶ ಶೆಣೈ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಕಳೆದ ಕೆಲವಾರು ತಿಂಗಳುಗಳಲ್ಲಿ ಹಾಲಿನ ದರಗಳು ಎರಡು ಬಾರಿ ಏರಿಕೆಯಾಗಿದೆ. ವಿದ್ಯುತ್ ದರಗಳೂ ಒಂದು ಬಾರಿ ಏರಿಕೆಯಾಗಿದ್ದು ವಿದ್ಯುತ್ ಉತ್ಪಾದನೆ ಮತ್ತು ಬೇಡಿಕೆಯ ಮಧ್ಯೆ ಇರುವ ಅಂತರದ ಪರಿಣಾಮ ಇನ್ನೊಮ್ಮೆ ಏರಿಕೆಯಾದರೂ ಆಗಬಹುದು. ಇನ್ನು ದಿನಸಿ ಮತ್ತು ತರಕಾರಿ ಹಾಗೂ ಇತರ ಅಗತ್ಯ ವಸ್ತುಗಳ ಬೆಲೆಗಳೂ ಏರುಹಾದಿಯಲ್ಲೇ ಇವೆ. ಈ ಬಾರಿಯ ಮಳೆಗಾಲದಲ್ಲಿ ಸೂಕ್ತ ಪ್ರಮಾಣದಲ್ಲಿ ಮಳೆಯಾಗದೇ ಇರುವುದು ಕೃಷಿ ಉತ್ಪಾದನೆಯ ಮೇಲೂ ದುಷ್ಪರಿಣಾಮ ಬೀರಿದೆ.

ಅಗತ್ಯವಸ್ತುಗಳ ಬೆಲೆಗಳು ಏರಿಕೆಯಾದ ಸಂದರ್ಭಗಳಲ್ಲಿ ಪ್ರತಿಸಲವೂ ಹೋಟೆಲಿನ ತಿಂಡಿತೀರ್ಥಗಳ ಬೆಲೆಗಳನ್ನು ಏರಿಸಲಿಕ್ಕಾಗುವುದಿಲ್ಲ. ನಷ್ಟ ಮಾಡಿಕೊಳ್ಳಬೇಕಾಗುತ್ತದೆ. ಇದು ಹೋಟೆಲು ಉದ್ಯಮದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಹೋಟೆಲು ಉದ್ಯಮವನ್ನು ಉಳಿಸುವುದಕ್ಕೆ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳುವ ಅಗತ್ಯವಿದೆ. ಇಲ್ಲದಿದ್ದರೆ ಈ ಉದ್ಯಮದಲ್ಲಿರುವ ಸಮಸ್ಯೆಗಳನ್ನು ಎದುರಿಸಲಿಕ್ಕಾಗದೆ ಮುಂದಿನ ಪೀಳಿಗೆ ಹೋಟೆಲು ಉದ್ಯಮದಿಂದ ವಿಮುಖವಾಗುತ್ತದೆ ಎಂದು ಅವರು ಹೇಳಿದ್ದಾರೆ.

ಹೊಟೆಲು ಉದ್ಯಮವು ಕಾಲಕಾಲಕ್ಕೆ ಹೊಸ ಆಯಾಮಗಳನ್ನು ಕಾಣುತ್ತಾ ಬೆಳೆದು ಬಂದಿದೆ. ಈಗ ಬಂದಿರುವ ಜನಪ್ರಿಯ ದರ್ಶಿನಿ ಶೈಲಿಯನ್ನು ಮಂಗಳೂರಿನ ನಮ್ಮ ತಾಜ್‌ಮಹಲ್ ಹೋಟೆಲುಗಳಲ್ಲಿ 1963ರಲ್ಲೇ ನಾವು ಪರಿಚಯಿಸಿದ್ದೆವು. ನಮ್ಮ ತಾಜ್‌ಮಹಲ್ ಹೋಟೆಲು ಸಮೂಹಕ್ಕೆ 97 ವರ್ಷಗಳು ತುಂಬಿದ್ದು 1926ಕ್ಕೆ ಶತಮಾನೋತ್ಸವ ಕಾಣಲಿದೆ. ಈ ಸಂಭ್ರಮದ ಹೊತ್ತಿನಲ್ಲಿ ನಮ್ಮ ಉದ್ಯಮವು ಎದುರಿಸುತ್ತಿರುವ ಸಮಸ್ಯೆಗಳು ನಮ್ಮನ್ನು ಆತಂಕಗೊಳಿಸುತ್ತಿವೆ. ಹೋಟೆಲು ಉದ್ಯಮವನ್ನು ಕಾರ್ಮಿಕರ ಕೊರತೆ ಬಹಳವಾಗಿ ಬಾಧಿಸುತ್ತಿರುವುದು ಚಿಂತಿಸಬೇಕಾದ ವಿಷಯ ಎಂದರು ಶೆಣೈಯವರು.

ಕೋವಿಡ್ ಸಂದರ್ಭದಲ್ಲಿ ಹೋಟೆಲು ಉದ್ಯಮವು ಬಹುಕಾಲದ ವರೆಗೂ ಬಾಗಿಲು ಮುಚ್ಚಬೇಕಾಗಿ ಬಂತು. ಸತತ ಎರಡು ವರ್ಷಗಳಲ್ಲಿ ಬಾಧಿಸಿದ ಕೋವಿಡ್ ಸಂದರ್ಭದಲ್ಲಿ ಬೇರೆ ಬೇರೆ ಪ್ರದೇಶಗಳಿಂದ ಬಂದಿದ್ದ ಅನೇಕ ಕಾರ್ಮಿಕರು ತಮ್ಮ ಊರಿಗೆ ಮರಳಿ ಕೃಷಿ ಮತ್ತು ಕುಲಕಸುಬುಗಳಲ್ಲಿ ತೊಡಗಿದರು. ಬಹಳ ಜನ ಕಾರ್ಮಿಕರು ಕೃಷಿ ಮತ್ತು ಕುಲಕಸುಬುಗಳನ್ನೇ ಶಾಶ್ವತವಾಗಿ ನೆಚ್ಚಿಕೊಂಡು ಹೋಟೆಲು ಉದ್ಯಮದ ಕಡೆಗೇ ಬಂದಿಲ್ಲ. ಈಗ ಹೊಸ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವುದು ಮತ್ತು ತರಬೇತಿ ನೀಡುವುದು ನಮಗೆ ಸವಾಲಾಗಿದೆ ಎಂದು ಅವರು ಹೇಳಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆಯ ಪರಿಣಾಮವಾಗಿ ತತ್ತರಿಸಿರುವ ಹೋಟೆಲು ಉದ್ಯಮಕ್ಕೆ ತೆರಿಗೆ ವಿನಾಯಿತಿ ಅಥವಾ ರಿಯಾಯಿತಿಗಳ ಮೂಲಕ ಸರಕಾರ ಬೆಂಬಲ ನೀಡಬೇಕಾಗಿದೆ. ಹಿಂದೆ ಶ್ರೀ ಸಿದ್ಧರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಹೋಟೆಲು ಉದ್ಯಮದ ಮೇಲಿನ ತೆರಿಗೆಯನ್ನು ಶೇ. 4ರಿಂದ ಶೇ. 2ಕ್ಕೆ ಇಳಿಸಿ ಪ್ರೋತ್ಸಾಹ ನೀಡಿದ್ದರು.

ಆವಾಗ GST ಇರಲಿಲ್ಲ. ನಂತರ GST ಶುರುವಾದಾಗಿನಿಂದ ಹೋಟೆಲ್ ಉದ್ಯಮಕ್ಕೆ 18% GST ಜಾರಿಗೆ ತಂದರು. ಅದಕ್ಕೆ ನಾವು ಬೆಂಗಳೂರು ಹೋಟೆಲ್ ಸಂಘದಿಂದ ಹೋರಾಟ ಮಾಡಿ 18% ಇದ್ದುದನ್ನು 5% ಇಳಿಸುವಂತೆ ಮಾಡಿ ಅದು ಇಡೀ ದೇಶಕ್ಕೆ ಅನ್ವಯವಾಗುವಂತೆ ಮಾಡಿದೆವು.ಅದು ಈಗಲೂ ಜಾರಿಯಲ್ಲಿದೆ. ಆದರೆ ರೂಂ ಬಾಡಿಗೆ ಮೇಲಿನ ತೆರಿಗೆಯನ್ನು ಈಗ ಹೆಚ್ಚು ಮಾಡಿದ್ದಾರೆ.

ಕರ್ನಾಟಕ ರಾಜ್ಯ ಹೋಟೆಲುಗಳ ಸಂಘವು ನಾಡಿನ ಸಮಗ್ರ ಹೋಟೆಲು ಉದ್ಯಮದ ಹಿತದೃಷ್ಟಿಯಿಂದ ತೆರಿಗೆ ರಿಯಾಯಿತಿಯೂ ಸೇರಿದಂತೆ ಹೋಟೆಲು ಉದ್ಯಮಕ್ಕೆ ದೊರೆಯಬೇಕಾದ ವಿವಿಧ ಸೌಲಭ್ಯಗಳ ಕುರಿತು ಸರಕಾರದ ಮೇಲೆ ಒತ್ತಡ ಹೇರುವ ಅಗತ್ಯವಿದೆ ಎಂದು ಶೆಣೈ ಅವರು ಅಭಿಪ್ರಾಯ ಪಟ್ಟಿದ್ದಾರೆ.



**ಹೋಟೆಲ್ ಉದ್ಯಮಕ್ಕೆ ಕೈಗಾರಿಕಾ ಸ್ಥಾನಮಾನ ನೀಡಲು ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸುತ್ತಿರುವುದು.**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಅಂಗಡಿ ಮುಂಗಟ್ಟುಗಳು ವಾಣಿಜ್ಯ ಮಳಿಗೆಗಳಲ್ಲಿ ನಾಮಫಲಕಗಳನ್ನು ಅಳವಡಿಸುವ ಬಗ್ಗೆ ಉನ್ನತ ಮಟ್ಟದ ಸಭೆ ನಡೆಸಿದ ನಂತರ ಮಾಧ್ಯಮಗೋಷ್ಠಿಯ ಮುಖ್ಯಾಂಶಗಳು

✦ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022ರ ಸೆಕ್ಷನ್ 17 (6) ರ ಪ್ರಕಾರ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅನುಮೋದನೆಯೊಂದಿಗೆ ನಡೆಸುತ್ತಿರುವ ವಾಣಿಜ್ಯ ಕೈಗಾರಿಕೆ, ವ್ಯಾಪಾರ ಸಂಸ್ಥೆ, ನ್ಯಾಸಗಳು, ಸಮಾಲೋಚನಾ ಕೇಂದ್ರಗಳು, ಆಸ್ಪತ್ರೆಗಳು, ಪ್ರಯೋಗಾಲಯಗಳು, ಮನೋರಂಜನಾ ಕೇಂದ್ರಗಳು ಮತ್ತು ಹೋಟೆಲ್ ಮುಂತಾದವುಗಳ ಹೆಸರನ್ನು ಪ್ರದರ್ಶಿಸುವ ಫಲಕಗಳ ಮೇಲಿನ ಅರ್ಧ ಭಾಗವು ಕನ್ನಡದಲ್ಲಿ ಇರತಕ್ಕದ್ದು ಎಂದು ತಿಳಿಸಲಾಗಿದೆ.

✦ ಇದಕ್ಕೂ ಮೊದಲು 2018 ರಲ್ಲಿ ಹೊರಡಿಸಿದ ಸುತ್ತೋಲೆಯಲ್ಲಿ ನಾಮಫಲಕದಲ್ಲಿ ಶೇ. 60 ಕನ್ನಡ ಭಾಷೆ ಹಾಗೂ ಶೇ. 40 ರಷ್ಟು ಇತರ ಭಾಷೆಯಲ್ಲಿರಬಹುದು ಎಂದು ತಿಳಿಸಲಾಗಿದೆ. ಇದರಂತೆಯೇ ಸುಗ್ರೀವಾಜ್ಞೆ ಹೊರಡಿಸಿ, ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022ರ ಸೆಕ್ಷನ್ 17 (6)ಕ್ಕೆ ತಿದ್ದುಪಡಿ ತಂದು 2024ರ ಫೆಬ್ರುವರಿ 28 ರೊಳಗೆ ವಾಣಿಜ್ಯ ಮಳಿಗೆಗಳು ಅನುಷ್ಠಾನಗೊಳಿಸಲು ಗಡುವು ನೀಡಲಾಗುವುದು.


✦ ಈ ಕಾಯ್ದೆಯ ನಿಯಮ 17(8) ರಲ್ಲಿ ರಾಜ್ಯದಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾದ ಜಾಹೀರಾತು ಮತ್ತು ಸೂಚನೆಗಳನ್ನು ಪ್ರದರ್ಶಿಸುವ ಎಲ್ಲ ಫಲಕಗಳಲ್ಲಿ ವಿಷಯಗಳ ನಿಗದಿತ ಶೇಕಡಾವಾರು ಪ್ರಮಾಣವು ಕನ್ನಡ ಭಾಷೆಯಲ್ಲಿರತಕ್ಕದ್ದು. ಜಾಹೀರಾತುಗಳ ವರ್ಗೀಕರಣ ಮತ್ತು ಕನ್ನಡದಲ್ಲಿ ಪ್ರದರ್ಶಿಸಬೇಕಾದ ಜಾಹೀರಾತು ವಿಷಯಗಳ ಶೇಕಡಾವಾರು ಪ್ರಮಾಣವು ರಾಜ್ಯ ಸರ್ಕಾರದಿಂದ ನಿಯಮಿಸಲಾದಂತೆ ಇರತಕ್ಕದ್ದು ಎಂದು ತಿಳಿಸಲಾಗಿದೆ. ಈ ಕಾಯ್ದೆ ಇಡೀ ರಾಜ್ಯಕ್ಕೆ ಅನ್ವಯಿಸುತ್ತದೆ.

✦ ಇದನ್ನು ಸಹ ಅನುಷ್ಠಾನಗೊಳಿಸಲಾಗುವುದು. ಈ ಕಾಯ್ದೆಯ ಅಧಿಸೂಚನೆ ಹೊರಡಿಸಲು ಹಾಗೂ ನಿಯಮಗಳನ್ನು ರೂಪಿಸಲು ಕೂಡಲೇ ಕ್ರಮ ಕೈಗೊಳ್ಳಲಾಗುವುದು.

✦ ರಾಜ್ಯದ ಹಿತದೃಷ್ಟಿಯಿಂದ ಶಾಂತಿಯುತ ಪ್ರತಿಭಟನೆ ಮಾಡಿದರೆ ನಾವು ವಿರೋಧಿಸುವುದಿಲ್ಲ. ಆದರೆ ಕಾನೂನು ಕೈಗೆ ತೆಗೆದುಕೊಂಡರೆ ಸರ್ಕಾರ ಕ್ರಮ ಕೈಗೊಳ್ಳಲಿದೆ. ಸಂಘಟನೆಯಿರಲಿ, ವ್ಯಕ್ತಿಗಳಿರಲಿ, ಖಾಸಗಿ ಸಂಸ್ಥೆಗಳಿರಲಿ ಯಾರಾದರೂ ಸಂವಿಧಾನಕ್ಕೆ ಅನುಗುಣವಾಗಿ ನಡೆದುಕೊಳ್ಳಬೇಕು. ಯಾರೂ ಕಾನೂನು ಕೈಗೆ ತೆಗೆದುಕೊಳ್ಳಬೇಡಿ ಎಂದು ಮನವಿ ಮಾಡುತ್ತೇನೆ. ಕಾನೂನು ಸುವ್ಯವಸ್ಥೆ ಕಾಪಾಡುವುದು ಸರ್ಕಾರದ ಜವಾಬ್ದಾರಿ. ಎಲ್ಲ ಸಂಘಟನೆಗಳು, ಹೋರಾಟಗಾರರಲ್ಲಿ ಕಾಯ್ದೆ ಜಾರಿ ಮಾಡುತ್ತೇವೆ. ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022ನ್ನು ಜಾರಿಗೊಳಿಸಲಾಗುವುದು. ಅಲ್ಲಿವರೆಗೆ ಎಲ್ಲರೂ ಶಾಂತಿಯುತವಾಗಿ ಕಾನೂನು ಸುವ್ಯವಸ್ಥೆ ಕಾಪಾಡುವ ಕೆಲಸ ಮಾಡಬೇಕು. ಕರ್ನಾಟಕದಲ್ಲಿ ಕನ್ನಡ ಸಾರ್ವಭೌಮ ಭಾಷೆ, ಆಡಳಿತ ಭಾಷೆ. ಇದರಲ್ಲಿ ಯಾವುದೇ ರಾಜಿ ಇಲ್ಲ.

**✦ ಎಲ್ಲ ಖಾಸಗಿ ಸಂಸ್ಥೆಯವರು ತಮ್ಮ ನಾಮಫಲಕವನ್ನು ಶೇ. 60:40ರ ಅನುಪಾತದಲ್ಲಿ ನಿಗದಿತ ಗಡುವಿನೊಳಗೇ ಅಳವಡಿಸಬೇಕು. ಸಾರ್ವಜನಿಕರು ಆತಂಕಪಡಬೇಕಾಗಿಲ್ಲ.**

# ನಿಮ್ಮ ಮಿತ್ರ



ಪ್ರತಿಯೊಂದು ಯುಗದಲ್ಲೂ ಮನುಷ್ಯನ ಪ್ರಾಣ ಆತನ ವಿವಿಧ ಅಂಶಗಳಲ್ಲಿತ್ತು, ಆದರೆ ಕಲಿಯುಗದಲ್ಲಿ ಮಾನವನ ಪ್ರಾಣ ಆತನ ಆಹಾರದಲ್ಲಿ ಅಡಕವಾಗಿದೆ

ಯಾವುದೇ ವ್ಯಕ್ತಿ ಹಸಿವಿನಿಂದ ಇದ್ದರೆ ಯೋಜಿತವಾಗಿ ಯೋಚಿಸಲಾರ ಹಾಗೂ ಏನನ್ನೂ ಸಾಧಿಸಲಾರ ಪ್ರತಿಯೊಬ್ಬರು ಆಹಾರ ಮತ್ತು ವಿಶ್ರಾಂತಿ ಹೊಂದಿದರೆ ಮಾತ್ರ ಚಟುವಟಿಕೆಯಿಂದಿರಲು ಸಾಧ್ಯ ಅಂತಹ ಹಸಿವು ಮತ್ತು ದಣಿವನ್ನು ನೀಗಿಸುವ ಸ್ಥಳವೆಂದರೆ ಅದು ಅವರವರ ಮನೆ ಹಾಗೂ ಹೋಟೆಲ್ ವಸತಿಗೃಹಗಳು ಮಾತ್ರ ಇದರಿಂದ ನಾವು ನಮ್ಮ ಹೋಟೆಲ್ ಉದ್ಯಮದ ಮಹತ್ವವನ್ನು ಅರಿಯಬಹುದು.

ಇಂತಹ ಶ್ರೇಷ್ಠ ಉದ್ಯಮವನ್ನು ಬಹಳಷ್ಟು ಮಂದಿ ತಲೆಮಾರುಗಳಿಂದ ನಡೆಸಿಕೊಂಡು ಬಂದು ಸಾರ್ಥಕ್ಯ ವನ್ನು ಮೆರೆಯುತ್ತಿದ್ದರೆ, ಯುವ ಉದ್ಯಮದಾರರು ಹೊಸ ಹೊಸ ತಂತ್ರಜ್ಞಾನದೊಂದಿಗೆ ಈ ಉದ್ಯಮಕ್ಕೆ ನವ ರೂಪರೇಶಗಳನ್ನು ತಂದುಕೊಟ್ಟು ತಮ್ಮದೇ ಆದ ಛಾಪನ್ನು ಭರವಸೆಯನ್ನು ಮೂಡಿಸುತ್ತಿದ್ದಾರೆ.

ಯಾವುದೇ ಉದ್ದಿಮೆ ಸಂಘಟಿತವಾಗಿದ್ದರೆ ಮಾತ್ರ ಅದರ ಸಮಸ್ಯೆಗಳು, ಅಕಾಲಿಕವಾಗಿ ಬಂದೊದಗಬಹುದಾದ ಸಂಕಷ್ಟಗಳನ್ನು ಎದುರಿಸಬಹುದಾಗಿದೆ.

ತಮಗೆಲ್ಲ ತಿಳಿದಂತೆ ನಮ್ಮ ಹೋಟೆಲ್ ಉದ್ಯಮಕ್ಕೆ ಬಂದೊದಗುತ್ತಿರುವ ವಿವಿಧ ಇಲಾಖೆಗಳಿಂದ ಅಡಚಣೆಗಳು ಸಾಕಷ್ಟಿವೆ ನಾವೆಲ್ಲ ಸಂಘಟಿತವಾಗಿದ್ದರೆ ಮಾತ್ರ ಅವುಗಳನ್ನು ಎದುರಿಸಲು ಹಾಗೂ ಬಗೆಹರಿಸಲು ಸಾಧ್ಯ, ಜೊತೆಗೆ ಹೊಸ ಹೊಸ ಆವಿಷ್ಕಾರಗಳನ್ನು ಇನ್ನಷ್ಟು ಅಳವಡಿಸಿಕೊಂಡು, ನಮ್ಮ ಈ ಉದ್ಯಮವನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯಬಹುದು.

ಯಾವುದೇ ಸಂಸ್ಥೆಯ ಶಕ್ತಿ ಎಂದರೆ ಅದರ ಸದಸ್ಯರು ಹಾಗಾಗಿ ನಮ್ಮ ಸಂಘವನ್ನು ಬಲಿಷ್ಠಗೊಳಿಸಲು ನಾವು ಇನ್ನೂ ಹೆಚ್ಚಿನ ಸದಸ್ಯರನ್ನು ಹೊಂದುವ ಮೂಲಕ ಸದೃಢರಾಗಬೇಕಾಗಿದೆ.

ನಮ್ಮ ರಾಜ್ಯಾದ್ಯಂತ ಹೋಟೆಲ್ ವಸತಿಗೃಹ ಹೊಂದಿರುವ ಪ್ರತಿಯೊಬ್ಬರು ನಮ್ಮ ಕರ್ನಾಟಕ ರಾಜ್ಯ ಹೋಟೆಲ್ ಸಂಘದ ಸದಸ್ಯರೆಂದು ಹೆಮ್ಮೆಯಿಂದ ಪ್ರೌಢಿಮೆಯಿಂದ ಬೀಗುವಂತಾಗಬೇಕು.

ಆ ನಿಟ್ಟಿನಲ್ಲಿ ವಿಶೇಷವಾಗಿ ಎಲ್ಲಾ ಜಿಲ್ಲಾ ಪದಾಧಿಕಾರಿಗಳು ಮತ್ತು ಸಂಸ್ಥೆಯ ಕ್ರಿಯಾಶೀಲ ಸದಸ್ಯರಾಗಿರುವ ಪ್ರತಿಯೊಬ್ಬರು, ಈ ಉದ್ಯಮದಲ್ಲಿರುವ ತಮ್ಮ ಸ್ನೇಹಿತರನ್ನು ಸಂಘಕ್ಕೆ ಸದಸ್ಯರನ್ನಾಗಿಸುವ ಮಹತ್ತರ ಜವಾಬ್ದಾರಿಯನ್ನು ನಿರ್ವಹಿಸಿ, ಉದ್ಯಮದ ಹಾಗೂ ನಮ್ಮ ಸಂಘದ ಔನ್ನತ್ಯಕ್ಕೆ ಕಾರಣರಾಗಬೇಕಾಗಿ ತಮ್ಮಲ್ಲಿ ಅತ್ಯಂತ ಕಾಳಜಿಯಿಂದ ವಿನಂತಿಸಿಕೊಳ್ಳುತ್ತೇನೆ.

**–ಸುಬ್ರಹ್ಮಣ್ಯ ಆರ್. ತಂತ್ರಿ**
**ವಲಯ ಕಾರ್ಯದರ್ಶಿ**

## ಅಜಿನೋ ಮೋಟೋ..



ಇತ್ತೀಚಿನ ದಿನಗಳಲ್ಲಿ ನಾವು ಸೇವಿಸುವ ಬಹಳಷ್ಟು ಫಾಸ್ಟ್ ಫುಡ್‌ನಲ್ಲಿ Tasting Salt ಬಳಸುತ್ತಾರೆ. ಈ ಉಪ್ಪನ್ನು ಭಾರತಕ್ಕೆ ಚೀನಾದಿಂದ ಗೊಬ್ಬರದ ಹೆಸರಿನಲ್ಲಿ ಆಮದು ಮಾಡಿಕೊಳ್ಳಲಾಗುವುದು. ಭಾರತದ ಯುವಕರು ಮತ್ತು ಯುವತಿಯರು ಬಿಪಿ ಮತ್ತು ಮಧುಮೇಹ ರೋಗಕ್ಕೆ ತುತ್ತಾಗುವಂತೆ ಮಾಡಲು ಚೀನಾದ ವ್ಯವಸ್ಥಿತ ಯೋಜನೆಯ ಸಂಚು ಇದು ಎಂದು ನಂಬಲಾಗಿದೆ .ಚೀನಾದಲ್ಲಿ ಇದನ್ನು ಬಳಸಿದರೆ ಮರಣದಂಡನೆಯನ್ನು ವಿಧಿಸುವ ಶಿಕ್ಷೆಯ ಸಾಧ್ಯತೆಯೂ ಇದೆ. ಈ ಉತ್ಪನ್ನ ಬಳಸಿ ಮಾಡಿದ ಆಹಾರ ಪದಾರ್ಥಗಳನ್ನು 40 ದಿನಗಳ ಕಾಲ ತಿಂದರೆ ಜೀವನ ಪರ್ಯಂತ ಬಿಪಿ ಶುಗರ್ ನಿಂದ ಬಳಲುವುದು ಖಚಿತ. ಮಾಧ್ಯಮಗಳಲ್ಲಿ ಈ ವಿಷಯ ಚರ್ಚಿಸಲ್ಪಟ್ಟು ಇದರ ವಿರುದ್ಧ ಮಹಾ ಚಳುವಳಿ ನಡೆಸದ ಹೊರತು ಈ ದೇಶದಲ್ಲಿ ರೋಗಿಗಳ ಸಂಖ್ಯೆ ಕಡಿಮೆಯಾಗುವುದಿಲ್ಲ ಎಂದು ಕೆಲವು ಸಾಮಾಜಿಕ ಸಂಘಟನೆಗಳು ಚರ್ಚೆಗಳನ್ನು ನಡೆಸಿದವು .ಈ ಉಪ್ಪಿನ ಬಳಕೆಯಿಂದ ಸಾವಿರಾರು ರುಚಿಗಳನ್ನು ಗುರುತಿಸಬಹುದಾದ ನಾಲಿಗೆ ತನ್ನ ಈ 'ವಿಶೇಷ ಗುರುತಿಸುವ' ಗುಣವನ್ನು ಕ್ರಮೇಣ ಕಳೆದುಕೊಳ್ಳುತ್ತದೆ. ಒಂದರ್ಥದಲ್ಲಿ ಈ ಉಪ್ಪು ನಮ್ಮ ನಾಲಿಗೆಯನ್ನೇ ಕೊಲ್ಲುತ್ತದೆ ಅಲ್ಲದೆ ನಮ್ಮ ಮೇಧೋ ಶಕ್ತಿಯನ್ನು ನಾಶಪಡಿಸುತ್ತದೆ. ಇದನ್ನು ಎಲ್ಲಾ ಭಾರತೀಯರಿಗೆ ತಿಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಅಲ್ಲದೆ ಇದು ನಮ್ಮ ಕರ್ತವ್ಯವು ಕೂಡ.

## Karnataka pitches for more heritage sites to be recognised by UNESCO

Just earlier this year, the sacred ensembles of Karnataka's Hoysala Temples secured a place in the prestigious UNESCO World Heritage list taking the total number of such properties in Karnataka go up to 4.

And now, there is news that two more sites in Karnataka are set to be proposed for tentative list of UNESCO World Heritage sites; viz., Shravanabelagola in Hassan and Lakkundi in Gadag.

Of course, the procedure for inclusion in the list of world heritage sites is a long one and the final selection would certainly take some time. That said, the mere fact that Karnataka has many heritage sites worthy of being considered to be inducted in this elite list is a testimony to the rich cultural richness prevalent in our state. Cultural tourism is big draw attracting hordes of tourists, both domestic and international into Karnataka.

Said Mr. G K Shetty, Hon. Secretary, KSHA “As interest in heritage destinations among domestic tourists continues to grow, across our various popular heritage destinations in Karnataka like Hampi, Mysuru, Srirangapatna, Pattadakal, Aihole, Mysuru, Badami, our hotel industry will also ben3efit from increased footfalls.”



The colossal statue of Lord Gomateshwara in Shravanabelagola town is considered as one of the largest monolithic statues in the world.

Built in 12th century CE by Western Chalukyas, the Manikeshwara temple in Lakkaundi in Gadag is famous for its step well known as Muskina Bhavi. The temple is highly ornate with lathe-turned pillars and perforated Jalis (stone-lattice windows).



## 1st Cruise Ship of the season arrives in Mangaluru in December

The 1st of 10 cruise ships to arrive in this year, the majestic 'Seven Seas Navigator' called on Mangaluru Port in early December 2023 bringing with her 500 tourists and team of 350 crew members. The momentous occasion signifies a resurgence of maritime tourism in the region, much to the delight of local businesses and stakeholders.

The Seven Seas Navigator arrived from the Middle East, touching the ports of Mumbai and Goa. After spending one day packed with exciting site seeing and experiential activities she proceeded to Cochin and then onwards to Colombo and to the Far East.

While in Mangaluru, tourists were exposed to cultural programs, taken to touristic sites in and around Mangaluru including, to Moodabidri, Karkala, iconic religious sites, served delectable local cuisine and also taken around for shopping at some famous local eateries. The day was well spent soaking the local sights and experiences, hopefully sufficient to create a lasting impression on our visiting guests about that part of our State. With 10 cruise vessels scheduled to arrive at Mangaluru during the current season, is indicative of the growing popularity of New Mangalore as a compelling cruise destination. This influx of tourists via waterways at the port, is anticipated to contribute significantly to the local economy, generating revenue for various sectors, including tourism, hospitality, and transportation.

Pic of Seven Seas Navigator Cruise



# Photo Gallary

## KAMBALA



### ಕರ್ನಾಟಕ ರಾಜ್ಯ ಹೋಟೆಲುಗಳ ಸಂಘದ ಮನವಿಯ ಮೇರೆಗೆ ಬೆಂಗಳೂರು ಕಂಬಳದ ಉತ್ಸವಕ್ಕೆ ಧನ ಸಹಾಯ ಮಾಡಿದವರು (25/11/2023 - 26/11/2023)

| | |
|---|---|
| ಶ್ರೀ ರಾಧಕೃಷ್ಣ ಅಡಿಗ– ಬ್ರಾಹ್ಮಣರ ಕಾಫೀ ಕೇಂದ್ರ | 15,000 |
| ಶ್ರೀ ರಾಜೇಶ್ | 20,000 |
| ಶ್ರೀ ಸುಹಾಸ್ – (ಕೇಕ್ ವಾಲ) | 25,000 |
| ಶ್ರೀ ಜಯರಾಂ ಶೆಟ್ಟಿ | 30,000 |
| ಶ್ರೀ ದಿನೇಶ್ ಹೆಗ್ಡೆ – ಶೆಟ್ಟಿ ಲಂಚ್ ಹೋಂ | 30,000 |
| ಶ್ರೀ ಉದಯ್ – ಉದಯ ಕೇಟರೆರ್ಸ್ | 50,000 |
| ಶ್ರೀ ಪಿ ಸಿ ರಾವ್ – ಐಡಿಯಲ್ ಸೊಲ್ಯೂಷನ್ಸ್ | 50,000 |
| ಶ್ರೀ ನಾಗರಾಜ್ ಎ. ವಿ. ಎಸ್. ಕೆಟರಾರ್ಸ್ | 50,000 |
| ಶ್ರೀ ನರೇಂದ್ರ ಕುಮಾರ್ ಕೆ –ಆಶಾ ಸ್ವೀಟ್ಸ್ | 1,00,000 |
| ಶ್ರೀ ಕೆ ಎನ್ ವಾಸುದೇವ ಅಡಿಗ – ಪಾಕಶಾಲ ಗ್ರೂಪ್ ಆಫ್ ಹೋಟೆಲ್ಸ್ | 1,00,000 |
| ಶ್ರೀ ಚೇತನ್ ಹೆಗ್ಡೆ – ವೈಟ್ ಹಾರ್ಸ್ ಬಾರ್ ಅಂಡ್ ರೆಸ್ಟೋರೆಂಟ (1522) | 1,00,000 |
| ಶ್ರೀ ಎಂ ವಿ ರಾಘವೇಂದ್ರ ರಾವ್ – ಕದಂಬ ಗ್ರೂಪ್ ಆಫ್ ಹೋಟೆಲ್ಸ್ | 1,00,000 |
| ಶ್ರೀ ಭಾಗ್ಯಲಕ್ಷ್ಮಿ ಟ್ರೇಡರ್ಸ್ – ಹಳೇ ತರಗುಪೇಟೆ | 1,00,000 |
| ಡಾ: ರವಿಚಂದ್ರನ್ – ಲಾ ಸಾರ ಗ್ರೂಪ್ ಆಫ್ ಹೋಟೆಲ್ಸ್(ನಂದನ) | 1,00,000 |
| ಶ್ರೀ ಬಿ ರಮೇಶ್ ನಾಯ್ದು – ಮೇಘನಾ ಫುಡ್ಸ್ | 1,00,000 |
| ಶ್ರೀ ಶ್ರೀನಿವಾಸ ರಾಜ ಮತ್ತು ಶ್ರೀ ವೆಂಕಟೇಶ ರಾಜ – ಮೆಸರ್ಸ್ ಅಡ್ಯಾರ್ ಆನಂದ ಭವನ್ | 1,00,000 |
| ಮೆಸರ್ಸ್ ಸ್ವಾತಿ ಹಾಸ್ಪಿಟಲಿಟಿ ಸರ್ವಿಸಸ್ – (ಪೂರ್ವಭಾವಿ ಸಭೆಯ ಔತಣ ಕೂಟ) | 2,50,000 |
| ಶ್ರೀ ಬೇಳೂರು ರಾಘವೇಂದ್ರ ಶೆಟ್ಟಿ– ಮಾಜಿ ಅಧ್ಯಕ್ಷರು, ಕರ್ನಾಟಕ ಕರಕುಶಲ ನಿಗಮ | 3,00,000 |
| ಬಂಟ್ಸ್ ಹೋಟೆಲು ಮಾಲೀಕರ ಸಂಘ | 3,00,000 |
| ಶ್ರೀ ಜಿ ಕೆ ಶೆಟ್ಟಿ– ಸಿಎಂಡಿ– ಸ್ವಾತಿ ಗ್ರೂಪ್ | 5,00,000 |
| ಫುಡ್ ಕೋರ್ಟ್/ಸ್ಟಾಲ್ ಭಾಗವಹಿಸಿದವರು | |
| ಮೆಸರ್ಸ್ ಮಾತಾಸ್ ಕಾಫೀ. | |
| ಮೆಸರ್ಸ್ ಬಾಯರ್ಸ್ ಕಾಫಿ | |
| ಮೆಸರ್ಸ್ ಎಂಪೈರ್ ಈಸಿ ಬೈಟ್ಸ್ | |






'ಬೆಂಗಳೂರು ಕಂಬಳ ನಮ್ಮ ಕಂಬಳ' ಉತ್ಸವದ ಅಭೂತಪೂರ್ವ ಯಶಸ್ಸಿಗೆ ಹಗಲಿರುಳು ಶ್ರಮಿಸಿದ,ಮತ್ತು ತಮ್ಮ ಬಿಡುವಿರದ ಸಮಯದ ನಡುವೆಯೂ ಕಾರ್ಯಕ್ರಮಕ್ಕೆ ಆಗಮಿಸಿ ಪ್ರೋತ್ಸಾಹಿಸಿದ ಎಲ್ಲರಿಗೂ ಹೃದಯಪೂರ್ವಕ ಧನ್ಯವಾದಗಳು. ಕರಾವಳಿಯ ಸಾಂಸ್ಕೃತಿಕ ಶ್ರೀಮಂತಿಕೆಯ ಬೆಳವಣಿಗೆಗೆ ನಾವೆಲ್ಲರೂ ಇನ್ನಷ್ಟು ಜೊತೆಯಾಗಿ ಕೆಲಸ ಮಾಡೋಣ

**ಕೆ. ಪ್ರಕಾಶ್ ಶೆಟ್ಟಿ**
ಗೌರವಾಧ್ಯಕ್ಷರು ಕಂಬಳ ಸಮಿತಿ ಬೆಂಗಳೂರು

# Photo Gallary




Pakwan Hotel Bagalkot Receiving Best Connoisseurs award




Zonal Secretary Sri Shekar Naidu being felicitated by AOICON




Rameshwaram Cafe Goes Global

## ಬಾಗಲಕೋಟೆ ಹೋಟೆಲ್ ಮತ್ತು ಉಪಹಾರ ಮಂದಿರ ಸಂಘದ ನೂತನ ಕಾರ್ಯಕಾರಿ ಸಮಿತಿ









*Hon.secretary Honouring Minister Sri Ramalinga Reddy*






# ಕರ್ನಾಟಕದ ಆಹಾರ ಸಂಸ್ಕೃತಿಗೆ ಅಡಿಗರ ಕೊಡುಗೆ ಅಪಾರ

## ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅಭಿಮತ

### ವಿಶ್ವೇಶ್ವರ್ ಭಟ್ ಶ್ಲಾಘನೆ




ಮಾನ್ಯ ಸದಸ್ಯರೇ,

ಇತ್ತೀಚೆಗೆ ನಡೆದ ಕನ್ನಡಪರ ಹೋರಾಟಗಾರರಿಂದ ಆದ ಗಲಭೆಯ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಹೊರಡಿಸಿರುವ ಸುತ್ತೋಲೆಯಲ್ಲಿ ನಾಮಫಲಕಗಳು 60:40 ಅನುಪಾತದಲ್ಲಿ ಇರಬೇಕೆಂದು ತಿಳಿಸಿರುತ್ತಾರೆ. ಅದರಂತೆ ನಮ್ಮ ಹೋಟೆಲ್ ಉದ್ಯಮ ಬಾಂಧವರು ತಮ್ಮ ತಮ್ಮ ಹೋಟೆಲ್ ನಾಮಫಲಕ (NAME BOARD) ಗಳನ್ನು ಶೇಕಡ 60 % ಕನ್ನಡದಲ್ಲಿ ಎದ್ದು ಕಾಣುವಂತೆ ಮತ್ತು 40% ಇಂಗ್ಲಿಷ್ ಅಥವಾ ಇತರೆ ಭಾಷೆಯಲ್ಲಿ ಇರುವಂತೆ ನೋಡಿಕೊಂಡು ರಾಜ್ಯ ಸರ್ಕಾರದ ಆದೇಶ ಪಾಲಿಸಬೇಕಾಗಿ ವಿನಂತಿ ಹಾಗೆಯೇ ಹೋಟೆಲ್ ಒಳಗಡೆ ಇರುವಂತಹ ಮೆನು ಕಾರ್ಡ್‌ನಲ್ಲಿ ಸಹ ಒಂದು ಕಡೆ ಕನ್ನಡ ಮತ್ತೊಂದು ಕಡೆ ಇಂಗ್ಲಿಷ್ ಅಥವಾ ಇತರೆ ಭಾಷೆಯಲ್ಲಿ ಇರಲಿ. ಬೇರೆ ಯಾವುದೇ ಮಾಹಿತಿ ಬಂದಲ್ಲಿ ಸಂಘದ ವತಿಯಿಂದ ತಮಗೆ ತಿಳಿಸಲಾಗುವುದು

– ಕಾರ್ಯಕಾರಿ ಸಮಿತಿ


Business
meet or
Luxury
stay
KORAMANGALA | INDIRANAGAR | KAMMANAHALLI | MARATHAHALLI | SAHAKARNAGAR | BOMMASANDRA
HOTEL
LA SARA
( Formerly known as Nandhana Group of Hotels )
No. 52, 5th Cross, 6th Block, 60ft Road,
Koramangala, Bangalore - 560 095
Ph: +91-80-41858299
9980018236, 9980029797
E: reservations@lasarahotels.com
www.lasarahotels.com

KPHRA VARTHE ENGLISH & KANNADA MONTHLY Reg. No./KA/BGW/1832/2021-2023 | RNI No. KARBIL/2019/78029
Posted at Bengaluru PSO, Bengaluru-560 026 on 11th or 14th of every Month | Pages: 20 | PMG BG/WPP-395/2021-2023
Date of Published 8th of Every Month
Permitted on 18.11.2021







KPHRA VARTHE Kannada & English Monthly Printed & Published by B. Chandrashekar Hebbar, President, on behalf of Karnataka Pradesh Hotel & Restaurant Association (R). No. 1, Vishwambara, KPHRA, Golden Jubilee Bhavan, 3rd Floor, 2nd Main, Seshadripuram, Bengaluru-560 020 & Printed at Sri P.S. Venkatesh Babu,Omkar Offset Printers, No. 3/3, 1st Main Road, New Tharagupet, Bangalore-560 002.